1974

# ಟೊರೆಂಟೋ ಕನ್ನಡಿಗರಿಂದ ನಾಡಹಬ್ಬ ಆಚರಣೆ

ಟೊರೆಂಟೋ, ಡಿ. ೨೪– ಟೊರೆಂಟೋ ಕನ್ನಡ ಸಂಘದ ಆಶ್ರಯದಲ್ಲಿ ನವೆಂಬರ್ ತಿಂಗಳು ೨೩ನೇ ತಾರೀಖು ಬರ್ಚ್‌ಮೌಂಟ್‌ಪಾರ್ಕ್ ಕೊಲಿಜಿಯೇಟ್ ಇನ್ಸ್ಟಿಟ್ಯೂಟ್ ಆವರಣದಲ್ಲಿ ನಾಡಹಬ್ಬವನ್ನು ಆಚರಿಸಲಾಯಿತು. ಆ ದಿನ ಸಂಜೆ ನಡೆದ ಕಾರ್ಯಕ್ರಮಕ್ಕೆ ನಿರೀಕ್ಷಿಸಿದ್ದಕ್ಕೂ ಮೀರಿ ಇಲ್ಲಿನ ಕನ್ನಡಿಗರು ಬಂದಿದ್ದರು. ಕನ್ನಡನಾಡಿನ ಮಹಿಳೆಯರು ತಯಾರಿಸಿದ ರುಚಿಕರವಾದ ಭೋಜನ ಎಲ್ಲರ ಮೆಚ್ಚುಗೆಯನ್ನು ಪಡೆಯಿತು. ಸಂಘದ ಅಧ್ಯಕ್ಷರಾದ ಡಾ|| ಹಿರೇಮಲ್ಲೂರ ಈಶ್ವರನ್ ಸ್ವಾಗತ ಭಾಷಣ ಮಾಡಿದ ಮೇಲೆ, ಶ್ರೀ ಗೋಪಾಲಹೆಗ್ಗಡೆ ಹಾಗೂ ಶ್ರೀಮತಿ ರೇವತಿ ಸತ್ಯ ಅವರ ನೇತೃತ್ವದಲ್ಲಿ ವಿವಿಧ ವಿನೋದಾವಳಿ ಕಾರ್ಯಕ್ರಮ ನಡೆಯಿತು. ಶ್ರೀಮತಿ ಆಶಾಗೋಪಾಲ್ ಅವರಿಂದ ಭರತನಾಟ್ಯವಾದ ಮೇಲೆ ಶ್ರೀಮತಿಯರಾದ ಚಿತ್ರಾ, ಗೀತಾ, ಮೈಥಿಲಿ, ಶಾರದ, ಸರ್ವಶ್ರೀ ನಾಗರಾಜ್, ವಿಜಯಕುಮಾರ್, ರಘುನಾಥ್, ಜಯರಾಮ್ ಇವರುಗಳಿಂದ ಸುಶ್ರಾವ್ಯವಾದ ಸಂಗೀತ ಕಾರ್ಯಕ್ರಮ ನಡೆಯಿತು. ಶ್ರೀಯುತ ದಿಲೀಪ್ ಅವರು ಪ್ರಸಿದ್ಧ ಚಲನಚಿತ್ರ ಕಲಾವಿದರ ಅನುಕರಣೆ ಮಾಡಿದರು. ಸಂಜೆಯ ವಿಶೇಷ ಕಾರ್ಯಕ್ರಮದ ಅಂಶವೆಂದರೆ ಡಾ|| ಎಚ್. ಕೆ. ರಂಗನಾಥ್ ಇವರಿಂದ ರಚಿತವಾದ "ಬೇನೆಯ ಬೋನಿನಲ್ಲಿ" ಎಂಬ ನಾಟಕ, ಎಲ್ಲರ ಮನಸ್ಸನ್ನು ಸೆಳೆಯಿತು. ಶ್ರೀಯುತ ಶಿವರಾಮ್ ನಿರ್ದೇಶಿಸಿದ ಈ ನಾಟಕದಲ್ಲಿ ಶ್ರೀಯುತರಾದ ಶಿವರಾಮ್, ಸೋಮಸುಂದರ್, ಪ್ರಭಾಕರ್, ರಾಮಮೂರ್ತಿ ಹಾಗೂ ಕುಮಾರಿ ಶರಾವತಿ ಇವರುಗಳು ಭಾಗವಹಿಸಿದ್ದರು. ಎಲ್ಲ ಕಲಾವಿದರುಗಳ ಉತ್ತಮ ಅಭಿನಯದಿಂದ ಈ ನಾಟಕ ಆ ಸಂಜೆಯ ಕಾರ್ಯಕ್ರಮಕ್ಕೆ ಮೆರಗು ಕೊಟ್ಟಿತು. ಸಂಘದ ಕಾರ್ಯದರ್ಶಿ ಶ್ರೀ ರಾಮಮೂರ್ತಿ ವಂದನಾರ್ಪಣೆ ಮಾಡಿದರು.

ಪ್ರಜಾವಾಣಿ. ಡಿ. 25 1974.